ಅಲ್ಲಿ ನೆರೆದಿದ್ದ ಎಲ್ಲರೂ ಮರಗುವವರೇ! ನನ್ನ ಸೋದರಮಾವ ಮದುವೆಯ ದಿನ ಆಕೆಯನ್ನು ಹುಲಿಯಂತೆ ಎತ್ತಿಕೊಂಡು ಹೋಗಿದ್ದ; ಆಕೆ ತೀರಿಕೊಂಡ ಈ ದಿನ ವ್ಯರ್ಥವಾಗಿ ಹರಿದುಹೋಗುವ ನೀರಿನಂತಾಗಿದ್ದ.

★★★

ಹದಿನೈದು ದಿನಗಳಿಂದ ಆಕೆಗೆ ಸಾವಿನ ಬೆದರಿಕೆ ಇದ್ದಂತೆ ಕಾಣುತ್ತಿತ್ತು. ಸಾವು ಕೂಡ ನುಂಗಿ ಕೂಡ್ರಬಹುದಾದ ವಸ್ತು ಎಂದು ತಿಳಿದಿದ್ದಳು. ಎದೆ ನೋವು, ಉಸಿರಾಟಕ್ಕೆ ತೊಂದರೆ ಎಂದು ಕೇಳಿಸಲೂ ಆಗದ ರೀತಿಯಲ್ಲಿ ಸಣ್ಣದಾಗಿ ಹೇಳಿದ್ದಳು. ಕೇಳಿದವರು ಬೇಸಿಗೆಯ ಬಿಸಿಲಿನ ತಾಪ ಎಂದು ಸುಮ್ಮನಾಗಿದ್ದರು. ಸಾವು ಎಂದೂ ಕೂಡ ಆರೋಪವನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡು ಹೋಗಲಾರದು. ಅಲ್ಲಲ್ಲಿ ಅಷ್ಟು ಸುಳಿವು ಕೊಟ್ಟು ತಪ್ಪು ಮಾಡಿಲ್ಲ ಎನ್ನುವಂತೆ ಸಾಗುತ್ತದೆ. ಆದರೆ ಅದು ಕೊಟ್ಟ ಸುಳಿವಿನ ಸತ್ಯ ಗೊತ್ತಾಗುವುದಿಲ್ಲ. ಅದು ಕಪ್ಪು ಬಟ್ಟೆಯ ಮಧ್ಯೆ ಸೋಸಿಬಂದ ಸೋತ ಬೆಳಕಿನಂತಿರುತ್ತದೆ. ಹೆಣ್ಣು ಮಗಳಾದವಳಿಗೆ ನುಂಗುವುದೇ ಒಂದು ಕೆಲಸ. ಎಲ್ಲವನ್ನು ತಾಳಿಕೊಳ್ಳುವುದು. ಈಗ ಸರಿ ಹೋದೀತು, ಇನ್ನೊಂದು ಗಳಿಗೆಗೆ ಸರಿಹೋದೀತು ಎಂದು ಬಂದ ಅಪಾಯವನ್ನು ಮುಂದೂಡುತ್ತ ಬರುತ್ತಾಳೆ. ಬರುವ ಅಪಾಯ ಅದೇನು ತಿಳಿದಷ್ಟು ಹಗುರವಲ್ಲ. ಅದು ಬಲಿಗಾಗಿ ಕಾಯ್ದದ್ದು. ಎಲ್ಲವನ್ನೂ ಮೌನದಲ್ಲಿ ಸಹಿಸುತ್ತಲೇ ಸಾಯುವ ಹೆಂಗಸರ ಸಂಖ್ಯೆ ಎಷ್ಟು? ಮನೆಯ ಜಂತಿಯಲ್ಲಿಯ ಬಿದಿರುಗಳ ಲೆಕ್ಕಹಾಕಿ. ಪ್ರತಿಯೊಂದು ಮನೆಯಲ್ಲಿಯೂ, ಅಷ್ಟೇ ಸಂಖ್ಯೆಯಲ್ಲಿ ಸಾವುಗಳು ಘಟಿಸಿರುತ್ತವೆ. ಸಾವು ಕೂಡ ಬಂದು ಹೋಗುವ ಆಗುಂತಕನಂತೆ ಒಂದೆರಡು ದಿನ ನಿಂತು ಹೊರಟು ಹೋಗುತ್ತದೆ. ಮನೆಯಿಂದ ಹೆಣ ಎತ್ತಿದ ಮೇಲೆ, ನಮ್ಮ ಜೊತೆಜೊತೆಗೆ ಈ ಆಗಂತುಕ ನಡೆದುಬರುತ್ತಾನೆ, ಅಗ್ನಿ ಸ್ಪರ್ಶದ ನಂತರ ಒಂದು ಗಳಿಗೆಯೂ ನಿಲ್ಲದೇ ಹೊರಟು ಹೋಗುತ್ತಾನೆ. ಹೆಣದ ಸುತ್ತಲೂ ಇದ್ದವರ ವಿದಾಯದ ಕಣ್ಣೀರು ಸಾವಕಾಶವಾಗಿ ಆರ ಹತ್ತುತ್ತವೆ. ಮನೆ ಮುಟ್ಟುವುದರಲ್ಲಿ ಅರ್ಧ ಮರೆತುಹೋಗುತ್ತದೆ. ಹನ್ನೊಂದು ದಿನದ ಕಾರ್ಯಕ್ರಮ ಮುಗಿದ ಮೇಲೆ ಸಾವು ಒಂದು ನೆನಪು ಮಾತ್ರ. ಮತ್ತೆ ಬದುಕು ವಿಚಿತ್ರವಾಗಿ ಮನ ತಿರುಗಿಸುವ ನೀಲಿ ಲೋಲಕದ ಎದುರು ಪರಿಭ್ರಮಣೆ ಪ್ರಾರಂಭಿಸುತ್ತದೆ. ಸಂಸಾರ ಮತ್ತೆ ಚಲಿಸಲಾರಂಭಿಸುತ್ತದೆ. ಇದೆಲ್ಲ ಲೋಕದ ಮಟ್ಟಿಗೆ ಸಾಮಾನ್ಯವೆಂದರೂ ಕೆಲವು ಸಾವುಗಳು ಹಾಗಿರುವುದಿಲ್ಲ. ಇರಿದ ಆಯುಧಗಳನ್ನು ಅಲ್ಲಿಯೇ ಬಿಟ್ಟು ಹೋದಂತಿರುತ್ತವೆ. ನೊಂದ ಮನಸ್ಸುಗಳು ಅವುಗಳನ್ನು ಕಾಯುತ್ತ ನೆಟ್ಟ ಕಣ್ಣುಗಳಿಂದ ತದೇಕಚಿತ್ತದಲ್ಲಿ ನೋಡುತ್ತ ಕೂಡ್ರುತ್ತವೆ. ನೆನಪು ಒರೆಸಿ ಹಾಕಬಹುದಾದ ಅಕ್ಷರವಲ್ಲ, ಅದು ಆರದ, ಬತ್ತದ, ಸದಾ ಆರ್ದ್ರವಾಗಿ ಉಳಿಯುವಂತಹದ್ದು. ಅಲೆಗಳ ನಿರಂತರ ಹೊಡೆತದಿಂದ ಹುಟ್ಟಿದ ದಡದ ತೇವ. ತಂಬಲು ನೆಲ. ಈ ತೊಯ್ದ ನೆಲದಲ್ಲಿ ಇಷ್ಟೊಂದು ಕಣ್ಣೀರು ಇಂಗಿರಬಹುದೆಂದು ತಿಳಿಯಲಾಗುವುದಿಲ್ಲ. ನಾವು ತಿಳಿದದ್ದು ಒಂದು, ಅದು ಇರುವುದೇ ಬೇರೆ. ಸಾವು ಇಕ್ಕಟ್ಟಿಗೆ ಸಿಕ್ಕಿಸುತ್ತಲೇ ಜೀವವನ್ನು ಹಿಂಡಿ ಹಿಪ್ಪಿ ಮಾಡುತ್ತದೆ.

★★★

ಆಕೆ ಬದುಕಿದ್ದಾಗ ಹಲವಾರು ಅವತಾರಗಳಲ್ಲಿ ಕಂಡಳು. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಸಹಾಯ ಹಸ್ತ ನೀಡಿದ್ದಳು. ಆಕೆ ಯಾರ ಕಷ್ಟಕ್ಕೂ ಇಲ್ಲ ಎನ್ನುವವಳಲ್ಲ. ಬೆಳಿಗ್ಗೆ ಬೆಳಿಗ್ಗೆ ಮುಂಜಾನೆಯ ತಿಂಡಿ, ಭಕ್ರಿ, ಪಲ್ಯ ತಯಾರಿಸಿದಳೆಂದರೆ ಮನೆಯಿಂದ ಕೆಲಸಕ್ಕೆ ಹೋಗುವವರ